ಒಮ್ಮತದ ತೀರ್ಮಾನಗಳು ಆಗಿರಬೇಕು. ಅವು ಬಹುಮತದ ತೀರ್ಮಾನಗಳು ಆದರೆ ಮತ್ತೆ ಹಳ್ಳಿಯಲ್ಲಿ ಗೊಂದಲಗಳು ಸೃಷ್ಟಿಯಾಗುವಂತಹ ಸಂಬಂಧಗಳು ಇವೆ. 50 ರೂಪಾಯಿಗಳಿಗಿಂತ ಹೆಚ್ಚು ದಂಡ ವಿಧಿಸತಕ್ಕಂಥ ಅಧಿಕಾರವನ್ನು ಕೂಡ ಕೊಡಬಾರದು ಎನ್ನತಕ್ಕಂಥ ಚರ್ಚೆ ಇದೆ. ಅವರು ಯಾವುದೇ ಶಿಕ್ಷೆಯನ್ನು ಕೊಡಬಾರದು ಎನ್ನುವ ಮಾತು ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ತಾವು ಸಲಹೆ ಮಾಡಿದಂತೆ, ಮಾರ್ಚ್ ತಿಂಗಳಲ್ಲಿ ನಡೆಯುವ ಅಧಿವೇಶನದ ಪೂರ್ವದಲ್ಲಿಯೇ ಎಲ್ಲಾ ವಿರೋಧಪಕ್ಷದ ನಾಯಕರನ್ನು ಮತ್ತು ಕೆಲವು ಪರಿಣಿತರನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರೆದು ಅವರ ಸಲಹೆ ಸೂಚನೆಗಳನ್ನು ತೆಗೆದುಕೊಂಡು, ಈಗ ಇರುವಂತಹ ನಮ್ಮ ನ್ಯಾಯ ಪಂಚಾಯತಿಯ ಪರಿಕಲ್ಪನೆಯಲ್ಲಿಯೇ ಅವುಗಳನ್ನು ಅಳವಡಿಸುವಂತಹ ಕ್ರಮ ಕೈಗೊಳ್ಳುತ್ತೇನೆ.

Amount released to Government High School at Govanakoppa in Badami Taluk.

852: (4156)

Sri.B.B.Chimmanakatti (Badami): Will the Minister for Primary & Secondary Education be pleased to state

a) When the Government High School at Govanakoppa, Badami Taluk was started?

b) Whether it has come to the notice of the Government about the problem being faced in view of non-availability of building?

c) If so, how much amount will be released during this year to take up the work?

SRI.H.G.Govinda Gowda (Minister for primary & Secondary Education):

a) Government High School at Govanakoppa was started on 8.7.1996.

b) Yes.

c) Action plan was prepared by the Bijapur Zilla Panchayath for the Year 1998-99, before the establishment of Bagalkot District. Hence the budget has not been provided for this year. However necessary provision will be made in the budget for 1999-2000.

ಪೂರಕ ಟಿಪ್ಪಣಿ

ಬದಾಮಿ ತಾಲ್ಲೂಕಿನ ಗೋವನಕೊಪ್ಪದಲ್ಲಿ ದಿನಾಂಕ: 8-7-96ರಂದು ಸರ್ಕಾರಿ ಪ್ರೌಢಶಾಲೆ ಪ್ರಾರಂಭವಾಗಿದೆ. ಪ್ರಸ್ತುತ ಸದರಿ ಶಾಲೆಯು ಸರ್ಕಾರಿ ಪ್ರಾಥಮಿಕ ಶಾಲೆಯ ಕಟ್ಟಡದಲ್ಲಿ ಶಾಲೆ ನಡೆಯುತ್ತಿದೆ. ಬಾಗಲಕೋಟೆ ಜಿಲ್ಲೆಯಾಗುವ ಪೂರ್ವದಲ್ಲಿಯೇ ಜಿಲ್ಲಾ ಪಂಚಾಯತ್, ಬಿಜಾಪುರ ಜಿಲ್ಲೆಯಿಂದಲೇ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದುದರಿಂದ ಈ ಶಾಲೆಗೆ ಅವಕಾಶ ಕಲ್ಪಿಸಲಾಗಿರುವುದಿಲ್ಲ. ಆದ್ದರಿಂದ, ಸದರಿ ಶಾಲೆಗೆ ಕಟ್ಟಡಕ್ಕಾಗಿ ಅನುದಾನವನ್ನು 1999-2000ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗುವುದು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ ಬಾದಾಮಿ ತಾಲ್ಲೂಕು ಗೋವನಕೊಪ್ಪ ಪ್ರೌಢಶಾಲೆ 1996ರಲ್ಲಿ ಮಂಜೂರಾಗಿ ಪ್ರಾರಂಭವಾಗಿದೆ. ಅಲ್ಲಿ ಕಟ್ಟಡ ಇಲ್ಲದೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿರತಕ್ಕಂಥಾದ್ದನ್ನು ನಾನು ತಮ್ಮ ಗಮನಕ್ಕೆ ತಂದರೆ ತಾವು ಹೌದು ಎಂದು ಒಪ್ಪಿಕೊಂಡಿದ್ದೀರಿ. ಆದರೆ ಕಟ್ಟಡ ಕಟ್ಟಿಸುವುದನ್ನು ಇನ್ನೂ ಒಂದು ವರ್ಷ ತಡವಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಅಂದರೆ ಈ ತೊಂದರೆ ಇನ್ನೂ ಮುಂದುವರಿಯಬೇಕೋ ಹೇಗೆ?

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಪ್ರಾಥಮಿಕ ಪಾಠಶಾಲೆಗಳ ಕಟ್ಟಡಗಳ ಕೊರತೆ ಬಹಳ ಇತ್ತು. ಹೆಚ್ಚು ಕಡಿಮೆ ಆ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದೇವೆ, ಅದು ಜಿಲ್ಲಾ ಪಂಚಾಯತಿಗಳ ಮೂಲಕ ಸೌಲಭ್ಯಗಳನ್ನು ಒದಗಿಸಿ. ಪ್ರೌಢ ಶಾಲೆಗಳಲ್ಲಿಯೂ ಸಹ ತಮಗೆ ಗೊತ್ತಿರುವಂತೆ ಕಳೆದ ವರ್ಷ ಹೊಸದಾಗಿ ಯಾವ ಯಾವ ಕಡೆ ಪ್ರೌಢಶಾಲೆಗಳನ್ನು ಮಂಜೂರು ಮಾಡಿದ್ದೇವೆ ಅಲ್ಲಿಗೆ 9 ಲಕ್ಷರೂಪಾಯಿಗಳನ್ನು ಕೊಟ್ಟು ಸುಭಾಷ್ ಚಂದ್ರಬೋಸ್ ಅವರ ಹೆಸರನ್ನು ಇಡಬೇಕೆಂದು ಹೇಳಿ ಕಳೆದ ವರ್ಷ ಈ ಪ್ರೌಢಶಾಲೆಗಳನ್ನು ಕೊಟ್ಟಿರತಕ್ಕಂಥಾದ್ದು ತಮಗೂ ಗೊತ್ತಿದೆ. ಬಿಜಾಪುರ ಜಿಲ್ಲೆ, ಬಾದಾಮಿ ತಾಲ್ಲೂಕು ಅಣವಾಡಿ ಗ್ರಾಮಕ್ಕೆ ಒಂದು ಪ್ರೌಢಶಾಲೆ ಕಟ್ಟಡಕ್ಕೆ 9 ಲಕ್ಷ ರೂಪಾಯಿಗಳನ್ನು ಮಾನ್ಯ ಸದಸ್ಯರು ಕೇಳಿದ್ದರು. ಅಲ್ಲಿ ಅವಶ್ಯಕತೆ ಇತ್ತು ಕೊಟ್ಟಿದ್ದೇವೆ. ಈಗ ಎಲ್ಲಾ ಕ್ಷೇತ್ರಗಳಲ್ಲಿ

ಸಹ 9 ಲಕ್ಷ ರೂಪಾಯಿಗಳನ್ನು ಮೂರು ವರ್ಷಕ್ಕೆ ಒಂದೊಂದು ವರ್ಷಕ್ಕೆ ಮೂರು ಲಕ್ಷ ರೂಪಾಯಿಗಳಂತೆ, ಕೊಟ್ಟು ಇಡೀ ರಾಜ್ಯದಲ್ಲಿ ಈ ಹೊಸ ಯೋಜನೆ ಆಗಬೇಕೆಂದು ಮಾಡಿದ್ದೇವೆ. ಅನೇಕ ಪ್ರೌಢಶಾಲೆಗಳಿಗೆ ಕಟ್ಟಡಗಳು ಇಲ್ಲದೇ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ ವರ್ಷ ಈ ಪ್ರೌಢಶಾಲೆಗೂ ಹಣ ಕೊಟ್ಟಿದ್ದೇವೆ. ಬರುವ ವರ್ಷ ಸಹ ಹಣ ಜಿಲ್ಲಾ ಪಂಚಾಯತಿ ಮೂಲಕ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ವಿಶೇಷ ಅನುದಾನ ಕೊಟ್ಟು ಈ ವರ್ಷವಾದರೂ ದಯವಿಟ್ಟು ಪ್ರಾರಂಭ ಮಾಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೇ, ಸರ್ಕಾರದ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಅದರ ಇತಿಮಿತಿಯೊಳಗಡೆ ನಾವು ಕೆಲಸ ಮಾಡಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ 224 ಕ್ಷೇತ್ರಗಳಲ್ಲಿ 9 ಲಕ್ಷರೂಪಾಯಿಗಳನ್ನು ಕೊಟ್ಟು ಶಾಲಾ ಕಟ್ಟಡಗಳನ್ನು ಕಟ್ಟಿ ಅದಕ್ಕೆ ಸುಭಾಷ್ ಚಂದ್ರಬೋಸ್ ಅವರ ಹೆಸರನ್ನು ಇಡಬೇಕೆಂದು ಎಲ್ಲಾ ಶಾಸಕರು ಪ್ರಯತ್ನ ಪಟ್ಟಿದ್ದಾರೆ. ಅವರು ಕೇಳುವುದರಲ್ಲಿ ನ್ಯಾಯ ಇದೆ. ಇದಕ್ಕೆ ಅವಶ್ಯಕತೆ ಇದೆ. ಇಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ. ನಮ್ಮ ಇತಿಮಿತಿಯಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಈ ವರ್ಷ ನಾವು ಎಷ್ಟು ಒದಗಿಸುವುದಕ್ಕೆ ಸಾಧ್ಯ ಅದನ್ನು ನೋಡಿ ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಜಯದೇವ ಹೃದ್ರೋಗ ಆಸ್ಪತ್ರೆಯ ಸ್ಥಳಾಂತರ

583: (4146)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಬನ್ನೇರುಘಟ್ಟ ರಸ್ತೆಯಲ್ಲಿರುವ ಹೊಸ ಕಟ್ಟಡಕ್ಕೆ ಯಾವಾಗ ಸ್ಥಳಾಂತರಿಸಲಾಗುವುದು;

ಆ) ಈ ಆಸ್ಪತ್ರೆಯನ್ನು ಸ್ಥಳಾಂತರಿಸಿದ ನಂತರ ಈಗಿರುವ ಆಸ್ಪತ್ರೆಯ ಜಾಗವನ್ನು ಹೃದಯಾಘಾತಕ್ಕೊಳಗಾದವರಿಗೆ ತುರ್ತು ಚಿಕಿತ್ಸೆ ನೀಡಲು ಉಪಯೋಗಿಸಿಕೊಳ್ಳಲು ಸರ್ಕಾರ ಆಲೋಚಿಸಿದೆಯೇ?

ಡಾ ।। ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):